<u>ದಿಃ10.11.2023 OS No. 49/2019 PW-1</u>

ದಿಃ10.11.2023 ರಂದು ಸಾಕ್ಷಿಯನ್ನು ಪುನಃ ಕರೆಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಶ್ರೀ.ಕೆ.ಟಿ.ಟಿ. ವಕೀಲರಿಂದ</u>

ನಾನು ಮತ್ತು ಪ್ರತಿವಾದಿ ಸಂಬಂಧಿಕು ಮತ್ತು ಒಂದೇ ಗ್ರಾಮದವರಾಗಿರುತ್ತೇವೆ. ನಾನು ಮತ್ತು ಪ್ರತಿವಾದಿ ಡಿ.ಟಿ ರಾಮು ರವರ ಶಿಷ್ಯರು ಎಂದರೆ ಸರಿಯಲ್ಲ. ದಾವಾ ಸ್ವತ್ತು ಪ್ರತಿವಾದಿಯ ಸ್ವಾಧೀನದಲ್ಲಿ ಇರುತ್ತದೆ ಎಂದರೆ ಸರಿ. ನನ್ನ ಪ್ರಕಾರ 2008 ರಿಂದ ಪ್ರತಿವಾದಿಯು ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇರುತ್ತಾರೆ. ನಮ್ಮ ಗ್ರಾಮದಲ್ಲಿ ಡಿ.ಟಿ ರಾಮು ಮೆಮೊರಿಯಲ್ ವಸತಿ ನಿಲಯ ಇರುತ್ತದೆ ಎಂದರೆ ನನಗೆ ಮಾಹಿತಿ ಇರುವುದಿಲ್ಲ. ದಾವಾ ಸ್ವತ್ತಿನಲ್ಲಿ ಸದರಿ ವಸತಿ ನಿಲಯ ಇತ್ತು ಎಂದರೆ ಸರಿಯಲ್ಲ. ಪ್ರತಿವಾದಿಯು 2008 ಕ್ಕೆ ದಾವಾ ಸ್ವತ್ತಿಗೆ ಬಂದ ಬಗ್ಗೆ ನಾನು ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನನ್ನಸಹಿ ಇದೆ ಎಂದರೆ ಸರಿ. ಸದರಿ ಪ್ರಮಾಣ ಪತ್ರಕ್ಕೆ ಸಹಿ ಮಾಡುವ ಪೂರ್ವದಲ್ಲಿ ನಾನು ಅದನ್ನು ಓದಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ನಾನು ನನ್ನ ಮುಖ್ಯ ವಿಚಾರಣೆಯ 3 ನೇ ಖಂಡಿಕೆಯಲ್ಲಿ ಹೇಳಿರುವುದು ಸರಿ ಇರುತ್ತದೆ.

ನಾನು ಪ್ರತಿವಾದಿಗೆ 2008 ರಲ್ಲಿ ಬಾಡಿಗೆಗೆ ಕೊಟ್ಟ ಬಗ್ಗೆ ಅವರು ಸಂಬಂಧಿಕ ಆದ ಕಾರಣ ಅವರಿಂದ ನಾನು ಯಾವುದೇ ಕರಾರು ಬರೆಸಿಕೊಂಡಿರುವುದಿಲ್ಲ. ಪ್ರತಿವಾದಿಯು ಬಾಡಿಗೆ ಕೊಟ್ಟ ಬಗ್ಗೆ ನನ್ನ ಬಳಿ ಯಾವುದೇ ನಮೂದು ಇರುವುದಿಲ್ಲ. ನಾನು ಬಾಡಿಗೆ ಸಂಬಂಧವಾಗಿ ರಶೀದಿಯನ್ನು ಪ್ರತಿವಾದಿಗೆ ನೀಡಿರುವುದಿಲ್ಲ. ಪ್ರತಿವಾದಿಯು ನನ್ನ ಬಾಡಿಗೆದಾರರು ಎಂದು ತೋರಿಸಲು ನಾನು ದಾಖಲೆ ಹಾಜರುಪಡಿಸಿರುವುದಿಲ್ಲ. 2008 ಕ್ಕೆ ಪ್ರತಿವಾದಿಯು ದಾವಾ ಸ್ವತ್ತಿಗೆ

ಬಾಡಿಗೆದಾರರಾಗಿ ಬಂದಿರುತ್ತಾರೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿರುವುದಿಲ್ಲ.

ನಮ್ಮ ಗ್ರಾಮದಲ್ಲಿ 2000 ಇಸವಿಯಲ್ಲಿ ಡಿ.ಟಿ ರಾಮು ವಸತಿ ನಿಲಯ ಪ್ರಾರಂಭವಾಗಿರುತ್ತದೆ ಎಂದರೆ ಸರಿಯಲ್ಲ. ನಾನು 2000 ಇಸವಿಯಲ್ಲಿ ಚನ್ನಪಟ್ಟಣ ಮತ್ತು ಮಳೂರು ಪಟ್ಟಣದಲ್ಲಿ ವಾಸವಾಗಿದ್ದೆ. ಸದರಿ ಅವಧಿಯಲ್ಲಿ ನಾನು ಮಳೂರು ಪಟ್ಟಣದಲ್ಲಿ ವಾಸವಾಗಿದ್ದೆ ಎಂದು ತೋರಿಸಲು ನನ್ನ ಬಳಿ ದಾಖಲೆ ಇರುವುದಿಲ್ಲ. ನಾನು ಹಲವು ವರ್ಷಗಳಿಂದ ಚನ್ನಪಟ್ಟಣದಲ್ಲಿ ಮತ ಚಲಾವಾಣೆ ಮಾಡುತ್ತಿದ್ದು ಎಷ್ಟು ವರ್ಷಗಳಿಂದ ಎಂದು ನೆನಪಿರುವುದಿಲ್ಲ. ನಾನು 1979 ರಲ್ಲಿ ಕೆಲಸಕ್ಕೆ ಸೇರಿರುತ್ತೇನೆ. 1980 ರಲ್ಲಿ ನಾನು ಸಾಗರದಿಂದ ಬಂದಾಗ ಚನ್ನಪಟ್ಟಣದಲ್ಲಿ ವಾಸವಿದ್ದೆ ಎಂದರೆ ಊರಿನಲ್ಲಿ ವಾಸವಿದ್ದೆ. ನಾನು 2002 ರಲ್ಲಿ ಚನ್ನಪಟ್ಟಣ ದಲ್ಲಿ ವಾಸ ಮಾಡಲು ಪ್ರಾರಂಭಿಸಿರುತ್ತೆನೆ. 2000 ನೇ ಇಸವಿಯಲ್ಲಿ ದಾವಾ ಸ್ವತ್ತಿನ ಖಾತೆ ನನ್ನ ಹೆಸರಿನಲ್ಲಿ ಇತ್ತು. ನಾನು ಮನೆ ಕಟ್ಟಿಸುವಾಗ ನನ್ನ ಹೆಸರಿಗೆ ದಾವಾ ಸ್ವತ್ತಿನ ಖಾತೆ ಬದಲಾವಣೆ ಆಗಿರುತ್ತದೆ. ನಾನು ದಾವಾ ಸ್ವತ್ತಿನಲ್ಲಿಯೇ ಮನೆ ಕಟ್ಟಿಸಿರುತ್ತೆನೇ.

ನಾನು ಪ್ರತಿವಾದಿಗೆ ಕೊಟ್ಟಾಗ ದಾವಾ ಸ್ವತ್ತಿನಲ್ಲಿ ಮನೆ ಮತ್ತು ಖಾಲಿ ಜಾಗ ಇತ್ತು ಎಂದರೆ ಸರಿ. ನಾನು ದಾವಾ ಸ್ವತ್ತಿನಲ್ಲಿ ಮನೆ ಕಟ್ಟಿಸಿದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನಾನು ದಾವಾ ಸ್ವತ್ತನ್ನು ಪ್ರತಿವಾದಿಗೆ ಕೊಡುವ ಪೂರ್ವಲ್ಲಿಯೇ ಮನೆಯನ್ನು ಕಟ್ಟಿಸಿದ್ದೆ. ಪ್ರತಿವಾದಿಯು ನನಗೆ ನೋಟೀಸನ್ನು ನೀಡಿದ್ದರು ಎಂದರೆ ಸರಿ. ಆ ರೀತಿ ನೋಟೀಸು ಕೊಟ್ಟ ನಂತರ ನಾನು ಈ ದಾವೆಯನ್ನು ಸಲ್ಲಿಸಿರುತ್ತೆನೇ ಎಂದರೆ ಸರಿ.

ಪ್ರತಿವಾದಿಯು ನನ್ನ ವಿರುದ್ಧ ದಾವೆಯನ್ನು ಸಲ್ಲಿಸಿದ್ದು ಅದರ ವಿಚಾರವನ್ನು ನಾನು ತಿಳಿದುಕೊಂಡಿರುತ್ತೇನೆ. ನಾನು ದಾವಾ ಸ್ವತ್ತನ್ನು

ಪ್ರತಿವಾದಿಗೆ ಕೊಟ್ಟಾಗ ಅವರು ನನಗೆ ಹಣವನ್ನು ಕೊಟ್ಟಿರುವುದಿಲ್ಲ. ನಾನು ಪ್ರತಿವಾದಿಗೆ ಬಾಡಿಗೆಗೆ ಕೊಟ್ಟಾಗ ರೂ.1200/- ಮಾಸಿಕ ಬಾಡಿಗೆ ನಿಗದಿಯಾಗಿತ್ತು. ನಾನು 2008 ರಲ್ಲಿ ಪ್ರತಿವಾದಿಗೆ 1200 ರೂಗಳಿಗೆ ಬಾಡಿಗೆಗೆ ಕೊಟ್ಟಿದ್ದೆ ಎಂದು ನನ್ನ ದಾವೆಯಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ನಮೂದು ಮಾಡಿರುತ್ತೆನೇ. ನಾನು ಸದರಿ ವಿಚಾರವನ್ನು ನನ್ನ ದಾವೆಯಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ತನ್ನ ವಿಚಾರಣಾ ಪ್ರಮಾಣ ಪತ್ರವನ್ನು ನೋಡಿ ಸದರಿ ಸಂಗತಿಯನ್ನು ನಮೂದು ಮಾಡದೇ ಇರುವ ಬಗ್ಗೆ ಒಪ್ಪಿರುತ್ತಾರೆ. ನಿಪಿ.1 2008-09 ಕ್ಕೆ ಸಂಬಂಧಿಸಿದ್ದಾಗಿದ್ದು ಅದರ ಪೂರ್ವದಲ್ಲಿ ನನ್ನ ಹೆಸರಿಗೆ ಖಾತೆ ಇತ್ತು ಎಂದು ತೋರಿಸಲು ದಾಖಲೆ ಹಾಜರುಪಡಿಸಿರುವುದಿಲ್ಲ. ನಾನು 1200/- ರೂಗಳಿಗೆ ಪ್ರತಿವಾದಿಗೆ ಬಾಡಿಗೆಗೆ ಕೊಟ್ಟಿದ್ದೆ ಎಂದು ನನ್ನ ಪ್ರತ್ಯುತ್ತರ ನೋಟಿಸು ನಿಪಿ.2 ರಲ್ಲಿ ಹೇಳಿರುವುದಿಲ ಎಂದರೆ ಸರಿ. ನಾನು ನಿಪಿ.2 ಕ್ಕೆ ಸಹಿ ಮಾಡುವ ಪೂರ್ವದಲ್ಲಿ ಸದರಿ ದಾಖಲೆಯನ್ನು ನೋಡಿ ಆನಂತರ ಸಹಿ ಮಾಡಿರುತ್ತೆನೇ ಎಂದರೆ ಸರಿ.

ಪ್ರತಿವಾದಿಗೆ ನಾನು ಪ್ರತ್ಯುತ್ತರ ನೋಟೀಸು ನೀಡಿದ ನಂತರ ನಿಪಿ.4 ರಂತೆ ನಾನು ಪ್ರತಿವಾದಿಗೆ ತಿಳುವಳಿಕೆ ನೋಟಿಸನ್ನು ನೀಡಿದ್ದೆ ಎಂದರೆ ಜನವರಿಯಲ್ಲಿ ನೀಡಿರುತ್ತೆನೇ. ನಿಪಿ.4 ರಲ್ಲಿರುವ ಅಂಶಗಳು ನಿಪಿ.2 ರಲ್ಲಿ ಇರುವುಲ್ಲ ಎಂದರೆ ಇರಬಹುದು. ನಿಪಿ.4 ರಲ್ಲಿ ಹೇಳಿರುವ ವಿಚಾರಗಳನ್ನು ನಿಪಿ.2 ರಲ್ಲಿ ಬರೆಸಲು ನನಗೆ ತೊಂದರೆ ಇರುವುದಿಲ್ಲ. ಪ್ರತಿವಾದಿಯು ದಾವೆ ಸಲ್ಲಿಸಿದ ನಂತರ ನಾನು ಉತ್ಪತ್ತಿ ಮಾಡಿಕೊಂಡು ನಿಪಿ.4 ರಲ್ಲಿ ಅಂಶಗಳನ್ನು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.11 ಅನ್ನು ಪಡೆದುಕೊಂಡ ಒಂದೂವರೆ ತಿಂಗಳ ನಂತರ ನಾನು ನಿಪಿ.2 ಅನ್ನು ನೀಡಿರುತ್ತೇನೆ ಎಂದರೆ ನಾನು ತಕ್ಷಣ ಉತ್ತರ ನೀಡಿರುತ್ತೇನೆ.

ಪ್ರತಿವಾದಿಯು ಸಲ್ಲಿಸಿರುವ ದಾವೆಯಲ್ಲಿ ಕೆಲವು ದಾಖಲೆಗಳನ್ನು

ಹಾಜರುಪಡಿಸಿದ್ದು ಅವುಗಳ ಬಗ್ಗೆ ನಾನು ತಿಳಿದುಕೊಂಡಿರುತ್ತೇನೆ. ಅವರು ಯಾವ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ ಎಂಬುದು ನನಗೆ ಗೊತ್ತಿರುತ್ತದೆ. ನಾನು ದಾಖಲೆ ನೋಡದೆ ನನ್ನ ಸಹಿಯನ್ನು ಗುರುತಿಸಲು ಆಗುವುದಿಲ್ಲ. ಈಗ ವಕಾಲತ್ತಿನಲ್ಲಿ ಇರುವ ಸಹಿಯು ನನ್ನದಾಗಿರುತ್ತದೆ. ದಾಖಲೆ ನೋಡದೆ ನನ್ನಸಹಿಯನ್ನು ಗುರುತಿಸಲು ಆಗುವುದಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.